ಕಥೆ : ಚಂದಮಾಮಾ ಚಿತ್ರ : ಪದ್ಮವಾಸನ್

ರಾಜಗುರುಗಳು ಒಡ್ಡಿದ ಪರೀಕ್ಷೆ

1 ಒಂದು ರಾಜ್ಯದಲ್ಲಿ ದೇವದತ್ತನೆಂಬ ರಾಜ ಆಳುತ್ತಿದ್ದನು. ಅವನಿಗೆ ಇಬ್ಬರು ಮಕ್ಕಳು. ಅವರ ಹೆಸರು ನಂದ ಮತ್ತು ಸುನಂದ. ಇಬ್ಬರಿಗೂ ಒಂದಕ್ಷರವೂ ಬರುತ್ತಿರಲಿಲ್ಲ.



2



3 ನಂದ ಮತ್ತು ಸುನಂದರು ಗುರುಗಳ ಮನೆಯಲ್ಲಿ ವಾಸಿಸತೊಡಗಿದರು. ಕೆಲದಿನಗಳ ನಂತರ...



4 ಮಕ್ಕಳೇ, ನಿಮ್ಮ ಗುರುಕುಲವಾಸ ಹೇಗಿದೆ? ಗುರುಗಳು ಹೇಳಿಕೊಡುತ್ತಿರುವ ಪಾಠಗಳನ್ನು ಗಮನವಿಟ್ಟು ಕೇಳುತ್ತಿದ್ದೀರೇನು? ಅವುಗಳನ್ನು ನಿಮ್ಮ ಮನಸ್ಸಿನಲ್ಲಿ ಜ್ಞಾಪಕವಿಟ್ಟುಕೊಳ್ಳುತ್ತಿದ್ದೀರೇನು?



6 ಅಂದುಕೊಂಡಂತೆ, ರಾಜಗುರುಗಳು ವಿದ್ಯಾಸಾಗರರ ಶಾಲೆಗೆ ರಾಜಕುಮಾರರ ಜೊತೆಗೆ ಹೋದರು. ವಿದ್ಯಾ ಸಾಗರರ ಜೊತೆ ಮಾತನಾಡಿ, ಹುಡುಗರನ್ನು ಎರಡು ಗುಂಪು ಗಳನ್ನಾಗಿ ಮಾಡಿದರು. ಒಂದು ಗುಂಪಿನಲ್ಲಿ ಆ ಇಬ್ಬರು ರಾಜಕುಮಾರರಿದ್ದರು. ಇನ್ನೊಂದು ಗುಂಪಿನಲ್ಲಿ ಉಳಿದ ಐದು ಜನ ವಿದ್ಯಾರ್ಥಿಗಳಿದ್ದರು. ರಾಜಗುರುಗಳು ಎರಡು ಗುಂಪುಗಳಿಗೂ ಒಂದು ಪರೀಕ್ಷೆಯನ್ನು ನಿಗದಿಮಾಡಿದರು.





9 ತಾವು ಹಾಕಿಕೊಂಡ ಉಪಾಯದಂತೆ, ಆ ಐವರು ಮಕ್ಕಳೂ ಕಾರ್ಯಪ್ರವೃತ್ತರಾದರು.



10



11 ರಾಜ ಮತ್ತು ರಾಜಗುರುಗಳು ಆಶ್ರಮದ ಹತ್ತಿರ ಬಂದರು.



12 ಎಂಥ ಸುಂದರ ದೃಶ್ಯ! ಹೂವುಗಳ ಮತ್ತು ಗಂಧದ ಕಡ್ಡಿಗಳ ಸುಗಂಧವು ಮನೋಹರವಾಗಿದೆ.



13 ದಯವಿಟ್ಟು ಕುಳಿತುಕೊಳ್ಳಿ. ನೀವು ಬಹುದೂರದಿಂದ ಬಂದಿದ್ದೀರಿ. ನಿಮಗೆ ಆಯಾಸವಾಗಿರಬೇಕು.



ಹೊಗಳುವ ರೀತಿಯಲ್ಲಿ ನಿಮಗೆ ಕೊಟ್ಟ ಹಣವನ್ನು ನೀವು ಖರ್ಚುಮಾಡಿದ್ದೀರಿ. ನಾವೀಗ ಬರುತ್ತೇವೆ. ನಿಮಗೆಲ್ಲಾ ಒಳ್ಳೆಯದಾಗಲಿ.



ಅದೋ, ಮಣ್ಣಿನ ರಸ್ತೆ ಕೊನೆಗೊಳ್ಳುವಲ್ಲಿ ಇದೆ. ಸರಿ, ರಾಜಕುಮಾರರು ಎಲ್ಲಿದ್ದಾರೆ? ಅವರ ಸುಳಿವೇ ಕಾಣುತ್ತಿಲ್ಲವಲ್ಲ!



ರಾಜಗುರುಗಳು ಕೊಟ್ಟ ಹತ್ತು ಬಂಗಾರದ ನಾಣ್ಯಗಳಿಂದ ಹುಲ್ಲಿನಿಂದ ಹೊರತು ಬೇರೆ ಯಾವುದರಿಂದ ತಾನೇ ಮನೆ ತುಂಬಲು ಸಾಧ್ಯ? ಇದಲ್ಲದೆ, ಈ ಕೆಲಸವನ್ನು ಮಾಡಿಸಲು ಕೆಲಸಗಾರರನ್ನು ಗೊತ್ತುಮಾಡುವಷ್ಟು ಹಣವೂ ನಮ್ಮಲ್ಲಿ ಇರಲಿಲ್ಲ. ಈ ಕೆಲಸವನ್ನೂ ನಾವೇ ಮಾಡಬೇಕಾಯಿತು. ಹಾಗೆಂದೇ ನಮಗೆ ಬಹಳ ಆಯಾಸವಾಗಿದೆ.

16 ನಂತರ ರಾಜಗುರುಗಳು ರಾಜಕುಮಾರರನ್ನು ವಿದ್ಯಾಸಾಗರರ ಬಳಿಗೆ ಕರೆದುಕೊಂಡುಹೋದರು.

ಗುರುಗಳು ಪಕ್ಷಪಾತ ಮಾಡುತ್ತಿದ್ದಾರೆಂದು ರಾಜಕುಮಾರರು ದೂರಿದರು. ಈಗ ನೀವು ನನ್ನ ಪರೀಕ್ಷೆಯ ಫಲಿತಾಂಶವನ್ನು ಕಣ್ಣಾರೆ ಕಂಡಿದ್ದೀರಿ. ಈ ಐದು ಮಕ್ಕಳು ನಿಜವಾಗಿಯೂ ಮನೆಯನ್ನು ತುಂಬಿದ್ದಾರೆ. ನಮ್ಮ ಹೃದಯಗಳನ್ನು ಮಾತ್ರವಲ್ಲ, ಹೊಟ್ಟೆಯನ್ನೂ ತುಂಬಿಸಿದ್ದಾರೆ. ಅಲ್ಲಿ ಮಂಗಳಕರವಾದ ವಾತಾವರಣವಿತ್ತು. ಅದು ನಮ್ಮ ಕಣ್ಣುಗಳಿಗೆ ಆಹ್ಲಾದಕರವಾಗಿತ್ತು. ಹಾಗೆಯೇ ಹೃದಯಪೂರ್ವಕವಾದ ಸ್ವಾಗತವೂ ಲಭಿಸಿತು.

ಗುರುಗಳು 'ತುಂಬುವುದು ಎಂದರೆ ಏನು?' ಎನ್ನುವುದನ್ನು ಯಾವ ಪಕ್ಷಪಾತವಿಲ್ಲದೆ ಎಲ್ಲರಿಗೂ ಹೇಳಿಕೊಟ್ಟಿದ್ದಾರೆ. ಆದರೆ ರಾಜಕುಮಾರರು ಅದನ್ನು ಮನದಟ್ಟು ಮಾಡಿಕೊಳ್ಳಲಿಲ್ಲ. ಇದಕ್ಕೆ ವಿರುದ್ಧವಾಗಿ, ಈ ಐದು ಮಕ್ಕಳು ಆ ಪಾಠವನ್ನು ಚೆನ್ನಾಗಿ ಅರಿತುಕೊಂಡಿದ್ದಾರೆ. ಅಲ್ಲದೆ, ಅದನ್ನು ಅನುಷ್ಠಾನಕ್ಕೆ ತಂದು ಯಶಸ್ಸು ಗಳಿಸಿದ್ದಾರೆ.

ಕಬ್ಬಿಣದ ತುಂಡುಗಳಂತೆ ಇರುವ ವಿದ್ಯಾರ್ಥಿಗಳು ಗುರುಗಳೆಂಬ ಅಯಸ್ಕಾಂತಕ್ಕೆ ಆಕರ್ಷಿತರಾಗಬೇಕು. ಆಗಮಾತ್ರ ಕರ್ಪೂರದಂತೆ ಅವರ ಬುದ್ಧಿವಂತಿಕೆ ಬೆಳಕಿಗೆ ಬರುತ್ತದೆ.



ರಾಜಕುಮಾರರೇ, ಈಗಲಾದರೂ ನಮ್ಮ ರಾಜಗುರುಗಳು ಹೇಳಿದಂತೆ, ಶಿಕ್ಷಕರು ಹೇಳಿದ ಪಾಠಗಳನ್ನು ಶ್ರದ್ಧೆಯಿಂದ ಕಲಿಯಿರಿ; ಅವುಗಳನ್ನು ಮನದಟ್ಟು ಮಾಡಿಕೊಳ್ಳಿರಿ; ವಿದ್ಯೆಯ ಲಾಭವನ್ನು ಹೊಂದಿರಿ.